ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಅ/ಂ , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001

**E-mail ID: icps.kar@gmail.com** **Ph.No.080-22879381**

ಸಂಖ್ಯೆ:ಕೆಎಸ್ಐಸಿಪಿಎಸ್/ಮರ/ಮಕಸ-55/2020-21 ದಿನಾಂಕ:12.06.2020

ಅಧ್ಯಕ್ಷರು,
ಎಲ್ಲಾ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು

ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾಘಟಕ

ಮಾನ್ಯರೆ,

**ವಿಷಯ: ಭಾರತ ಸರ್ಕಾರವು ಕೋವಿಡ್-19 ಪ್ರಯುಕ್ತ ವಿಧಿಸಿದ ಲಾಕ್‌ಡೌನ್‌ಗೆ ಅನ್‌ಲಾಕ್-1 ಪ್ರಕಟಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅವಶ್ಯಕ ಮಾರ್ಗದರ್ಶನಗಳನ್ನು ನೀಡುವ ಬಗ್ಗೆ.**

ಉಲ್ಲೇಖ:
1. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸುಮೋಟೊರಿಟ್‌ಅರ್ಜಿ (ಸಿವಿಲ್) ಸಂ.4/2020 ದಿನಾಂಕ:03.04.2020
2. ಈ ಕಛೇರಿಆದೇಶ ಸಂ.ಕೆಎಸ್ಐಸಿಪಿಎಸ್/ಕೋವಿಡ್-19/ 31/2020-21 ದಿನಾಂಕ:14.04.2020
3. ಈ ಕಛೇರಿಆದೇಶ ಸಂ. ಕೆಎಸ್ಐಸಿಪಿಎಸ್/ಕೋವಿಡ್-19/ 67/2020-21 ದಿನಾಂಕ:03.05.2020
4. ಈ ಕಛೇರಿಆದೇಶ ಸಂ.ಕೆಎಸ್ಐಸಿಪಿಎಸ್/ಕೋವಿಡ್-19/ 69/2020-21 ದಿನಾಂಕ:05.05.2020
5. ಭಾರತ ಸರ್ಕಾರ ಹೊರಡಿಸಿದ ಆದೇಶ ಸಂ.40-3/2020-ಡಿಎಂ-1(ಎ) ದಿನಾಂಕ:30.05.2020
6. ಮಕ್ಕಳ ಕಲ್ಯಾಣ ಸಮಿತಿ ಅಧಿಕೃತ ವಾಟ್ಸ್‌ಪ್‌ಗ್ರೂಪ್‌ನಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳು ಭೌತಿಕ ಉಪಸ್ಥಿತಿ(ಫಿಜಿಕಲ್ ಸಿಟ್ಟಿಂಗ್) ಬಗ್ಗೆ ಗೈಡ್‌ಲೈನ್ಸ್ ಕೋರುತ್ತಾ ದಿನನಿತ್ಯ ಕಳುಹಿಸುತ್ತಿರುವ ಹಲವಾರು ಮನವಿಗಳು.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ(6)ರಂತೆ ಭಾರತ ಸರ್ಕಾರವು ಕೋವಿಡ್-19 ಪ್ರಯುಕ್ತ ವಿಧಿಸಿದ ಲಾಕ್‌ಡೌನ್‌ನ್ನು ನಾನ್‌ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಸಡಿಲಗೊಳಿಸಬಹುದೆಂಬ ವಿಷಯ ಆಧರಿಸಿ ಕೆಲವು ದಿನಗಳ ಹಿಂದಿನಿಂದಲೇ ಮಕ್ಕಳ ಕಲ್ಯಾಣ ಸಮಿತಿಗಳ ಅಧಿಕೃತ ವಾಟ್ಸ್‌ಪ್‌ಗ್ರೂಪ್‌ನಲ್ಲಿ ರಾಜ್ಯಾದ್ಯಂತ ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಂದ ಭೌತಿಕ ಉಪಸ್ಥಿತಿಗಳ ಬಗ್ಗೆ ಮಾರ್ಗದರ್ಶನಗಳನ್ನು ಹೊರಡಿಸಲು ಕೋರಿದ್ದು ಇರುತ್ತದೆ. ಸದರಿ ಮನವಿಗಳ ಹಿನ್ನೆಲೆಯಲ್ಲಿ ಹಾಗೂ

Scanned by TapScanner

ಉಲ್ಲೇಖ(5)ರ ಆದೇಶದನ್ವಯ ಕೇಂದ್ರ ಸರ್ಕಾರವು ಕೋವಿಡ್-19 ಹಿನ್ನೆಲೆಯಲ್ಲಿ ಪ್ರಕಟಿಸಿದ ಲಾಕ್‌ಡೌನ್‌ಗೆ ಅನ್‌ಲಾಕ್-1ನ್ನು ಪ್ರಕಟಿಸಿರುವುದರಿಂದ ಹಾಗೂ ಸದರಿ ಅನ್‌ಲಾಕ್-1 ರನ್ವಯ ನಾನ್‌ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಎಲ್ಲಾ ಸರ್ಕಾರದ ಕಛೇರಿ ಕೆಲಸಗಳನ್ನು ಅನುಮತಿಸಿದ ಹಿನ್ನೆಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳ ಭೌತಿಕ ಉಪಸ್ಥಿತಿಯ ಬಗ್ಗೆ ಮಾರ್ಗದರ್ಶನಗಳು ಈ ಕೆಳಕಂಡಂತಿರುತ್ತವೆ.

1) ವಿಶ್ವವ್ಯಾಪಿ ಕೋವಿಡ್-19 ಹಿನ್ನೆಲೆಯಲ್ಲಿ ಲಾಕ್‌ಡೌನ್(ದಿಗ್ಬಂಧನ) ನಂತರ ಅನ್‌ಲಾಕ್-1 ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾರ್ಗಸೂಚಿಗಳನ್ನು ನೀಡಿದ್ದರೂ, ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಗಳು ಯಾವ ರೀತಿ ಕಾರ್ಯ ನಿರ್ವಹಿಸತಕ್ಕದ್ದು ಎನ್ನುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯ ಉಲ್ಲೇಖ(1)ರ ಆದೇಶದಲ್ಲಿ ನಿರ್ದೇಶನ ನೀಡಿರುವುದರಿಂದ ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನವನ್ನು ಅನುಪಾಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ.

2) ಬಹುತೇಕ ಮಕ್ಕಳ ಕಲ್ಯಾಣ ಸಮಿತಿಗಳ ಕಛೇರಿಗಳು ಮಕ್ಕಳ ಪಾಲನಾ ಸಂಸ್ಥೆಗಳ ಪ್ರಾಂಗಣದ ಒಳಗಡೆ ಇರುತ್ತವೆ. ಆದರೆ ಕೋವಿಡ್-19 ಹಿನ್ನೆಲೆಯಲ್ಲಿ ಉಲ್ಲೇಖ(1)ರ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳು ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಭೌತಿಕ ಉಪಸ್ಥಿತಿ ಸಾಧ್ಯವಾದ ಮಟ್ಟಿಗೆ ನಡೆಸದಂತೆ ನಿರ್ದೇಶನವಿರುವುದರಿಂದ ಮಕ್ಕಳ ಕಲ್ಯಾಣ ಸಮಿತಿಗಳು ಅವರ ಭೌತಿಕ ಉಪಸ್ಥಿತಿಯನ್ನು(ಫಿಜಿಕಲ್ ಸಿಟ್ಟಿಂಗ್ಸ್) ಆಯಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸಬಹುದಾಗಿದೆ. ಒಂದು ವೇಳೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ ಕೂಡಾ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಇದ್ದ ಪಕ್ಷದಲ್ಲಿ ಹತ್ತಿರವಿರುವ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಖಾಲಿಯಿರುವ ವಸತಿಗೃಹದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಭೌತಿಕ ಉಪಸ್ಥಿತಿಗಳನ್ನು ನಡೆಸಬಹುದಾಗಿದೆ. ಮಕ್ಕಳ ಕಲ್ಯಾಣ ಸಮಿತಿ ಶಿರಸಿರವರು ಆ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ(ಸಿಡಿಪಿಓ) ಕಛೇರಿಯಲ್ಲಿ ಈ ಭೌತಿಕ ಉಪಸ್ಥಿತಿಯನ್ನು ನಿರ್ವಹಿಸಬಹುದಾಗಿದೆ. ಈ ಬಗ್ಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುವುದು.

3) ಮಕ್ಕಳ ಕಲ್ಯಾಣ ಸಮಿತಿಗಳ ಭೌತಿಕ ಉಪಸ್ಥಿತಿಗೆ ಆದಷ್ಟು ಕಡಿಮೆ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ/ಸಿಬ್ಬಂದಿ ಮತ್ತು ಸಂಬಂಧಿಸಿದ ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳು ಹಾಜರಾಗುವಂತೆ ನೋಡಿಕೊಳ್ಳುವುದು. ಆದಷ್ಟು ಕನಿಷ್ಠ ಅಧಿಕಾರಿ/ಸಿಬ್ಬಂದಿಗಳನ್ನು ಬಳಸಿಕೊಂಡು ಈ ಭೌತಿಕ ಉಪಸ್ಥಿತಿಯನ್ನು ನಡೆಸಲು ಕ್ರಮವಹಿಸಬೇಕು. ಜಿಲ್ಲಾ ಮಕ್ಕಳ ರಕ್ಷಣಾಘಟಕದ ಅಧಿಕಾರಿ/ಸಿಬ್ಬಂದಿ ಮತ್ತು ಮಕ್ಕಳ ಪಾಲನಾ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳು ಮಕ್ಕಳ ಕಲ್ಯಾಣ ಸಮಿತಿಯ ಭೌತಿಕ ಉಪಸ್ಥಿತಿಗೆ ಸಹಕರಿಸಬೇಕು.

4) ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಸದಸ್ಯರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳು ಕೋವಿಡ್-19 ಸಂಬಂಧಪಟ್ಟ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಅನುಪಾಲಿಸಬೇಕು. ಅಂದರೆ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದು, ಸ್ಯಾನಿಟೈಜರ್ ಬಳಸುವುದು ಇತ್ಯಾದಿ.

5) ಸದರಿ ಭೌತಿಕ ಉಪಸ್ಥಿತಿಗಳಲ್ಲಿ ಕಡತಗಳನ್ನು ನೋಡುವುದು ಮತ್ತು ಹಾರ್ಡ್ ಕಾಪಿ

Scanned by TapScanner

ಆದೇಶಗಳನ್ನು ಹೊರಡಿಸಬಹುದು. ಆದರೆ ಅನಿವಾರ್ಯ ಸಂದರ್ಭ ಹೊರತುಪಡಿಸಿ ಮಕ್ಕಳನ್ನು ಹಾಜರುಪಡಿಸುವುದನ್ನು ಪ್ರಸ್ತುತ ಕೋವಿಡ್–19 ಹಿನ್ನೆಲೆಯಲ್ಲಿ avoid ಮಾಡತಕ್ಕದ್ದು. ಮಕ್ಕಳ ಕಲ್ಯಾಣ ಸಮಿತಿಯವರು ದೂರವಾಣಿ ಮೂಲಕ ಮಕ್ಕಳನ್ನು ಮಾತನಾಡಿಸಬಹುದು. ಆನ್‌ಲೈನ್ ವೀಡಿಯೋಚಾಟ್ ಮೂಲಕ ಮಕ್ಕಳನ್ನು ನೋಡಬಹುದು ಹಾಗೂ ಮಾತನಾಡಿಸಬಹುದು. ಅನಿವಾರ್ಯ ಸಂದರ್ಭದಲ್ಲಿ ಮಗುವನ್ನು ಹಾಜರುಪಡಿಸಲೇಬೇಕಾದ ಸಂದರ್ಭವಿದ್ದಲ್ಲಿ ಮಗುವನ್ನು ಹಾಜರುಪಡಿಸಲು ಮಕ್ಕಳ ಕಲ್ಯಾಣ ಸಮಿತಿಯವರು ನಿರ್ದೇಶಿಸಲು ಇರುವ ಕಾರಣಗಳನ್ನು ಲಿಖಿತವಾಗಿದಾಖಲಿಸತಕ್ಕದ್ದು.

6) ಮಕ್ಕಳ ಕಲ್ಯಾಣ ಸಮಿತಿಯವರು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸುಮೋಟೊ ರಿಟ್‌ಅರ್ಜಿ (ಸಿವಿಲ್) ಸಂ.1/2020 ದಿನಾಂಕ:23.03.2020 ಹಾಗೂ ಸುಮೋಟೊರಿಟ್ ಅರ್ಜಿ (ಸಿವಿಲ್) ಸಂ.4/2020 ದಿನಾಂಕ:03.04.2020ರ ಆದೇಶಗಳಲ್ಲಿನ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಆ ಆದೇಶಗಳಿಗೆ ಅನುಸಾರವಾಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಯಾವೆಲ್ಲಾ ಕೋವಿಡ್–19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆ ಆಗಬೇಕು ಅವುಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಕಲ್ಯಾಣ ಸಮಿತಿಯ ಭೌತಿಕ ಉಪಸ್ಥಿತಿಗಳನ್ನು ನಿರ್ವಹಿಸಬೇಕು.

7) ಈಗಾಗಲೇ ಪೋಷಕರೊಂದಿಗೆ ಮನೆಗೆ ಕಳುಹಿಸಲಾಗಿರುವ ಮಕ್ಕಳೆಲ್ಲಾ ಪರೀಕ್ಷೆಗಳಿರುವ ಹಿನ್ನೆಲೆಯಲ್ಲಿಮಕ್ಕಳ ಪಾಲನಾ ಸಂಸ್ಥೆಗಳಿಗೆ ವಾಪಸ್ಸಾಗಲು ಅಪೇಕ್ಷಿಸಿರುವುದರಿಂದ ಸಂಸ್ಥೆಗಳಿಗೆ ವಾಪಸ್ಸಾಗಲಿರುವ ಎಲ್ಲಾ ಮಕ್ಕಳನ್ನು ದಾಖಲಿಸಿಕೊಳ್ಳತಕ್ಕದ್ದು ಹಾಗೂ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳು ಸೂಚಿಸಿದಂತೆ ಅವರೆಲ್ಲರಿಗೂ ಕ್ವಾರಂಟೈನ್‌ಇತ್ಯಾದಿ ಅವಶ್ಯಕ ಕೋವಿಡ್–19 ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ, ಕೋವಿಡ್–19 ತಪಾಸಣೆಯನ್ನು ಮಾಡಿಸಿ ನೆಗೆಟೀವ್ ವರದಿ ಬಂದ ನಂತರ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳ ಅನುಮತಿ ಮೇರೆಗೆ ಮಕ್ಕಳ ಪಾಲನಾ ಸಂಸ್ಥೆಗೆ ಮರುದಾಖಲಿಸಿಕೊಳ್ಳಬೇಕು.

8) ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಮಾತ್ರ ವರ್ಚುವಲ್ ಅಥವಾ ಆನ್‌ಲೈನ್ ಸಿಟ್ಟಿಂಗ್‌ಗಳನ್ನು ಮುಂದುವರೆಸುವುದು.

9) ಮಕ್ಕಳ ಪಾಲನ ಸಂಸ್ಥೆಗಳ ಭೌತಿಕ ತನಿಖೆಗಳನ್ನು ಮಾತ್ರ ಮುಂದಿನ ಆದೇಶದವರೆಗೆ ತಡೆಯುವುದು.

ಮಕ್ಕಳ ಕಲ್ಯಾಣ ಸಮಿತಿಯವರಾಗಲೀ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರಾಗಲೀ ಅಥವಾ ಸಂಬಂಧಿಸಿದ ಮಕ್ಕಳ ಪಾಲನಾ ಸಂಸ್ಥೆಯವರಾಗಲೀ ಎಲ್ಲರೂ ಕೋವಿಡ್–19 ಮುನ್ನೆಚ್ಚರಿಕಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ತಮ್ಮ ವಿಶ್ವಾಸಿ,

12.06.2020
ನಿರ್ದೇಶಕರು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

Scanned by TapScanner

**ಪ್ರತಿಯನ್ನು:-**

1. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳಿಗೆ ಮಾಹಿತಿಗಾಗಿ.
2. ಬೆಂಗಳೂರು ನಗರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ ಮಕ್ಕಳ ಪಾಲನಾ ಸಂಸ್ಥೆಯ ಆವರಣದಲ್ಲಿರುವುದರಿಂದ ಸದರಿ ಆವರಣದಲ್ಲಿ ಖಾಲಿ ಇರುವ ಕ್ವಾಟ್ರಸ್‌ನಲ್ಲಿ ನಡೆಸಿಕೊಳ್ಳಲು ಸೂಚಿಸಿದೆ.
3. ಉಪ ನಿರ್ದೇಶಕರು, ಉತ್ತರಕನ್ನಡ ಜಿಲ್ಲೆ ಇವರಿಗೆ ಮಾಹಿತಿಗಾಗಿ ಹಾಗೂ ಉತ್ತರಕನ್ನಡ ಜಿಲ್ಲೆಯ, ಮಕ್ಕಳ ಕಲ್ಯಾಣ ಸಮಿತಿ, ಶಿರಸಿ ಇವರಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಭೌತಿಕ ಉಪಸ್ಥಿತಿ (ಫಿಜಿಕಲ್ ಸಿಟ್ಟಿಂಗ್) ನಡೆಸಲು ಅವಕಾಶವಿಲ್ಲದ ಕಾರಣ ಶಿರಸಿ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ತಮ್ಮ ಕಛೇರಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿ, ಶಿರಸಿ ಇವರು ಭೌತಿಕ ಉಪಸ್ಥಿತಿ ನಡೆಸಲು ಅನುವು ಮಾಡಿಕೊಡುವಂತೆ ಸೂಚಿಸಲು ಕೋರಲಾಗಿದೆ.

Scanned by TapScanner